**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ,**
**ತಿಪಟೂರು**

**ಸಿ.ಸಿ. ನಂ.674/24 ಪ್ರಾ.ಸಾ – 2**
**ಚಾ.ಸಾ – 3**

**ದಿನಾಂಕ: 04-11-2025. ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಹೊನ್ನಯ್ಯ |
| ತಂದೆಯ ಹೆಸರು | : | ಸಣ್ಣ ನಿಂಗಯ್ಯ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಜೆಸಿಬಿ ಚಾಲಕ |
| ವಾಸಸ್ಥಳ | : | ಕೆ. ಬಿ. ಕ್ರಾಸ್ |

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :-**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗೆ ಇದೆ. ಚಾಸಾ- 2 ರವರ ಪರಿಚಯ ಇದೆ.

ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ . ನಾನು ಈ 1 ವರ್ಷದ ಹಿಂದೆ ಕೆ. ಬಿ. ಕ್ರಾಸ್ ಪೋಲಿಸ್ ಠಾಣೆಗೆ ಹೋದಾಗ ಪೋಲಿಸರು ನನ್ನ ಸಹಿಗಳನ್ನು ಪಡೆದಿರುತ್ತಾರೆ. ಸದರಿ ಸಹಿಗಳನ್ನು ಯಾವ ಕಾರಣಕ್ಕಾಗಿ ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಕ್ರಮ ಜರುಗಿಸಿರುವುದಿಲ್ಲ, ಯಾವುದೇ ಮು.ಮಾ.ಗಳನ್ನು ಜಪ್ತು ಪಡಿಸಿಕೊಂಡಿರುವುದಿಲ್ಲ. ಹಾಗೂ ಸ್ದಳದಲಿ ಯಾವುದೇ ಪಂಚನಾಮಯನ್ನು ತಯಾರು ಮಾಡಿರುವುದಿಲ್ಲ. ನಾನು ಪೋಲಸಿರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

ಸಾಕ್ಷಿ ನಾಯಾಲಯದ ಮುಂದಿರುವ ಆರೋಪಿಯನ್ನು ಹಾಗೂ ಮು.ಮಾ.ಗಳನ್ನು ನೋಡಿ ಗುರುತಿಸಿರುವುದಿಲ್ಲ. ಸಾಕ್ಷಿ ನಿಪಿ.1 ಮತ್ತು 2 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1(ಬಿ) ಮತ್ತು ನಿಪಿ.2(ಬಿ) ಎಂದು ಗುರುತಿಸಲಾಯಿತು.

***(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು).***

**CC. No.674/24** **PW -3**

**<u>ಪಾಟೀ ಸವಾಲು : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u> :-**

ದಿನಾಂಕ 24-03-2024 ರಂದು ಚಾಸಾ- 6 ರವರ ಸಮಕ್ಷಮ '' ದಿನಾಂಕ 24-03-2024 ರಂದು ------------------------ ನೋಡಿದರೆ ಗುರುತಿಸುತ್ತೇನೆ '' ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಯನ್ನು ನಿಪಿ.4 ಎಂದು ಗುರುತಿಸಲಾಯಿತು.

ದಿಃ24-03-2024 ರಂದು ಚಾಸಾ-1 ರವರು ನಗೆ ಹಾಗೂ ಚಾಸಾ-2 ರವರಿಗೆ ನಿಪಿ.1 ರಂತೆ ನೋಟೀಸನ್ನು ಜಾರಿ ಮಾಡಿ ಪಂಚನಾಮೆಗೆ ಸಾಕೆಯಾಗಿ ಬರಲು ಕೇಳಿಕೊಂಡಿದ್ದು ಅದಕ್ಕೆ ನಾವು ಒಪ್ಪಿ ಅವರೊಂದಿಗೆ ಕಲ್ಲುಶೆಟ್ಟ್ರಹಳ್ಳಿ ಗ್ರಾಮಕ್ಕೆ ಹೋಗಿ ಸ್ವಲ್ಪ ದೂರದಲ್ಲ ಜೀಪನ್ನು ನಿಲ್ಲಿಸಿ ನಾವುಗಳು ಕರಿಯಮ್ಮ ದೇವಸ್ಥಾನದ ರಸ್ತೆಯ ಕಡೆ ನೆಡೆದುಕೊಂಡು ಹೋಗುತ್ತಿದ್ದಾಗ ಒಬ್ಬ ವ್ಯಕಿತಯು ಒಂದು ಮನೆಯ ಮಂಭಾಗದ ರಸ್ತೆಯಲ್ಲಿ ಒಂದು ಪ್ಲಾಸ್ಟಿಕ್ ಚೀಲವನ್ನು ಇಟ್ಟುಕೊಂಡು ನಿಂತಿದ್ದು ಆತನನ್ನು ಹಿಡಿಯಲು ಹೋದಾಗ ಸಮವಸ್ತ್ರದಲ್ಲಿದ್ದ ಪೋಲಿಸರನ್ನು ನೋಡಿದ ವ್ಯಕ್ತಿಯು ಚೀಲವನ್ನು ಅಲ್ಲಿಯೇ ಬಿಟ್ಟು ದೇವಸ್ಥಾನದ ಕಡೆ ಓಡಲು ಪ್ರಯತ್ನಿಸಿದ್ದು ತಕ್ಷಣ ಪೋಲಸಿರು ಆತನನ್ನು ಹಿಡಿದು ಕರೆದು ವಿಚಾರಿಸಿದಾಗ ಆತನ ಹೆಸರು ಗಂಗಾದರ್ ಎಂದು ತಿಳಿಸಿದನು ಎಂದರೆ ಸರಿಯಲ್ಲ. ಸದರಿ ಚೀಲವನ್ನು ನಮ್ಮ ಸಮಕೆಮ ತೆಗೆದು ಪರಿಶೀಲಿಸಿದಾಗ ಅದರಲ್ಲಿ 90 ಎಂ ಎಲ್ ನ 37 ಓರಿಜನಲ್ ಚಾಯ್ಸ ಡೀಲಕಸ ವಿಸ್ಕಿ ಯ ಟೆಟ್ರಾ ಪ್ಯಾ.ಗಳು ಇದ್ದಿದ್ದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ 37 ಮದ್ಯ ತುಂಬಿದ ಟೆಟ್ರಾ ಪ್ಯಾ.ಗಳನ್ನು ರಾಸಾಯಿನಿಕ ಪರೀಕ್ಷಗಾಗಿ ಕಳುಹಿಸಲು ಬಿಳಿ ಬಟ್ಟೆಯ ಚೀಲಕ್ಕೆ ಹಾಕಿ ಬಾಯಿ ಕಟ್ಟಿ ನಮ್ಮ ಸಹಿ ಹಾಕಿಸಿರುವ ಸ್ಮಾರ್ಟ ಚೀಟಿಗಳನ್ನು ಅಂಟಿಸಿ ಕೆ ಎಂಬ ಅಕ್ಷರದಿಂದ ಸೀಲು ಮಾಡಿ ಮುದ್ದೆಮಾಲುಗಳನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆಸ ರಿಯಲ್ಲ. ಪಂಚನಾಮೆಯನ್ನು ಸಂಜೆ 7.45 ರಿಂದ ರಾತ್ರಿ 9.00 ವರೆಗೆ ಜರುಗಿಸಲಾಯಿತು ಎದರೆ ಸರಿಯಲ್ಲ. ಸಾಕ್ಷಿ ಮು,ಮಾಲುಗಳ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ.

ಆರೋಪಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ವಾಟೀ ಸವಾಲು : ಆರೋಪಿತರ ಪರ ವಕೀಲರು ವಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ : ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**ಪ್ರಧಾನ ಸಿವಿಲ್ ನ್ಯಾಯಾಧೀಶರು, ತಿಪಟೂರು.**